### ಹೋಲಿ ಶಬ್ದದ ಅರ್ಥ ಸ್ವರೂಪದಲ್ಲಿ ಸ್ಥಿತರಾಗುವುದು ಅರ್ಥಾತ್ ತಂದೆಯ ಸಮಾನರಾಗುವುದು

ಇಂದು ಬಾಪ್ದಾದಾರವರು ತನ್ನ ಹೋಲಿಯಸ್ಟ್(ಪವಿತ್ರ) ಹೈಯೆಸ್ಟ್ (ಶ್ರೇಷ್ಠ) ಹಾಗೂ ರಿಚ್ಚೆಸ್ಟ್ ಇನ್ ದ ವರ್ಲ್ಡ್ (ಪ್ರಪಂಚದಲ್ಲಿ ಎಲ್ಲರಿಗಿಂತ ಶ್ರೀಮಂತ) ಮಕ್ಕಳನ್ನು ನಾಲ್ಕು ಕಡೆಯ ನೋಡುತ್ತಿದ್ದರು. ಸಾಕಾರದಲ್ಲಿ ಸಮ್ಮುಖದಲ್ಲಿರಲಿ ಅಥವಾ ದೂರ ಕುಳಿತುಕೊಂಡು, ಹೃದಯದ ಸಮೀಪ ಇರುವಂತಹ- ನಾಲ್ಕು ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಾ ಇರುತ್ತಾರೆ. ಪ್ರತಿಯೊಂದು ಮಗುವು ಇಷ್ಟು ಪವಿತ್ರರಾಗುತ್ತಾರೆ, ಇಡೀ ಕಲ್ಪದಲ್ಲಿ ಬೇರೆ ಯಾರು ಸಹ ಇಷ್ಟು ಮಹಾನ್ ಪವಿತ್ರ ಆತ್ಮ ಆಗಿಲ್ಲ, ಆಗಲು ಸಾಧ್ಯವೂ ಇಲ್ಲ. ಸಮಯ ಪ್ರತಿ ಸಮಯ ಧರ್ಮಾತ್ಮಗಳು, ಮಹಾತ್ಮರು ಪವಿತ್ರರಾಗಿದ್ದರು ಆದರೆ ಅವರ ಪವಿತ್ರತೆ ಹಾಗೂ ನಿಮ್ಮ ಪವಿತ್ರತೆಯಲ್ಲಿ ಅಂತರವಿದೆ. ಈ ಸಮಯ ನೀವು ಪವಿತ್ರರಾಗುತ್ತೀರಿ, ಇದೇ ಪವಿತ್ರತೆಯ ಪ್ರಾಪ್ತಿ ಹಾಗೂ ಪ್ರಾಲಬ್ಧ ಭವಿಷ್ಯ ಅನೇಕ ಜನ್ಮಗಳವರೆಗೂ ತನು-ಮನ-ಧನ, ಸಂಬಂಧ, ಸಂಪರ್ಕ ಹಾಗೂ ಜೊತೆಯಲ್ಲಿ ಆತ್ಮವೂ ಸಹ ಪವಿತ್ರವಾಗಿದೆ. ಶರೀರವು ಪವಿತ್ರವಾಗಿರಬೇಕು ಹಾಗೂ ಆತ್ಮವೂ ಪವಿತ್ರವಾಗಿರಬೇಕು- ಇಂತಹ ಪವಿತ್ರತೆಯನ್ನು ನೀವು ಆತ್ಮಗಳು ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಮನ-ವಚನ-ಕರ್ಮ ಮೂರು ಪವಿತ್ರ ವಾಗುವುದರಿಂದ ಇಂತಹ ಪ್ರಾರಬ್ಧ ಪ್ರಾಪ್ತಿಯಾಗುತ್ತದೆ. ಇಂತಹ ಹೋಲಿಯಸ್ಟ್ (ಪವಿತ್ರ) ಆತ್ಮರಾಗಿದ್ದೀರಿ. ತಮ್ಮನ್ನು ತಾವು ಈ ರೀತಿ ಶ್ರೇಷ್ಠ ಹೋಲಿಯಸ್ಟ್ ಆತ್ಮ ಎಂದು ತಿಳಿಯುತ್ತೀರಾ? ಈಗ ಆಗಿದ್ದೀರಾ ಅಥವಾ ಆಗುತ್ತಿರುವಿರಾ? ಆಗುವುದು ಸಹಜವಾಗಿದೆಯೇ ಅಥವಾ ಸ್ವಲ್ಪ ಸ್ವಲ್ಪ ಕಠಿಣವೇ? ಆದರೆ ಕಲ್ಪದ ಹಿಂದೆಯೂ ಸಹ ಆಗಿದ್ದೀರಿ ಹಾಗೂ ಈಗಲೂ ಸಹ ಆಗಲೇಬೇಕು. ಪಕ್ಕಾ ಆಗಿದ್ದೀರಾ ಅಥವಾ ಸ್ವಲ್ಪ ಸ್ವಲ್ಪ ನಡೆಯುತ್ತದೆಯೇ? ಇಲ್ಲ. ಸ್ವಪ್ನ ಮಾತ್ರದಲ್ಲಿಯೂ ಅಪವಿತ್ರತೆ ಸಮಾಪ್ತಿಯಾಗಬೇಕು, ಇಷ್ಟು ನಿಶ್ಚಯ ಇದೆ ಅಲ್ಲವೇ- ಇಂದು ಆಗುತ್ತಿದ್ದೇವೆ ಹಾಗೂ ನಾಳೆ ಆಗಿಬಿಡುತ್ತೇವೆ. ಎಂದ ಮೇಲೆ ಹೋಲಿಯಸ್ಟ್ ಸಹ ಆಗಿದ್ದೀರಿ ಹಾಗೂ ಹೈಯೆಸ್ಟ್ ಸಹ ಆಗಿದ್ದೀರಿ.

ಶ್ರೇಷ್ಠಾತಿ ಶ್ರೇಷ್ಠ ತಂದೆಯ ಮಕ್ಕಳು ಶ್ರೇಷ್ಠಾತಿ ಶ್ರೇಷ್ಠರಾಗಿದ್ದಾರೆ. ಯಾವಾಗ ಹೈಯೆಸ್ಟ್ ಆಗುತ್ತೀರಿ ಆಗಲೇ ಪೂಜಿಸಲ್ಪಡುತ್ತೀರಿ. ಅಧ್ಯಕ್ಷರಾಗಲಿ, ಅಥವಾ ಪ್ರಧಾನಮಂತ್ರಿ ಆಗಿರಲಿ ಆದರೆ ಅವರು ಪೂಜ್ಯರಾಗುವುದಿಲ್ಲ. ತಾವು ಪೂಜ್ಯರಾಗುವಂತಹ ಆತ್ಮಗಳ ಮುಂದೆ ಪೂಜಾರಿಯಾಗಿ ನಮನ ಹಾಗೂ ಪೂಜೆ ಮಾಡುತ್ತಾರೆ. ಈಗಲೂ ಸಹ ಸ್ವರಾಜ್ಯ ಅಧಿಕಾರಿಯಾಗುತ್ತಿರಿ ಹಾಗೂ ಭವಿಷ್ಯದಲ್ಲಿಯೂ ಸಹ ರಾಜರ ರಾಜರಾಗುತ್ತೀರಿ. ಇಂತಹ ಹೈಯೆಸ್ಟ್ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಜೊತೆಯಲ್ಲಿ ಪ್ರಪಂಚದಲ್ಲೇ ಎಲ್ಲರಿಗಿಂತ ಶ್ರೀಮಂತರಾಗಿದ್ದೀರಿ. ನಿಮ್ಮ ಟೈಟಲ್ ಆಗಿದೆ ಪದಮಾ ಪದಂ ಪತಿ. ಹಾಗೂ ನಿಮ್ಮ ಬಳಿ ಇಂತಹ ಖಜಾನೆ ಇದೆ ಯಾವುದು ಕೊಟ್ಯಾಧಿಪತಿ, ಲಕ್ಷಾಧಿಪತಿ, ಕೋಟಿ-ಲಕ್ಷದಿಂದಲೂ ಇಂತಹ ಖಜಾನೆ ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ನೀವು ಶ್ರೇಷ್ಠ ಆತ್ಮಗಳು ತಂದೆಯ ಮೂಲಕ ಇಂತಹ ಭಾಗ್ಯವನ್ನು ಮಾಡಿಕೊಳ್ಳುತ್ತಿರುವಿರಿ, ಯಾವುದನ್ನು ಅನುಭವ ಮಾಡುತ್ತೀರಿ ಹಾಗೂ ವರ್ಣನೆಯೂ ಸಹ ಮಾಡುತ್ತೀರಿ- ನಮ್ಮ ಹೆಜ್ಜೆಯಲ್ಲಿ ಪದಮವಿದೆ ಎಂದು. ಹೆಜ್ಜೆಯಲ್ಲಿ ಪಧಮವಿದೆಯೇ ಅಥವಾ 100, ಸಾವಿರ ಇದೆಯೇ? ಎಷ್ಟೇ ದೊಡ್ಡ ಮಿಲಿಯನೆರ್ ಸಹ ಇಷ್ಟೊಂದು ಸಂಪಾದನೆಯನ್ನು ಮಾಡಲು ಸಾಧ್ಯವಿಲ್ಲ. ಹೆಜ್ಜೆಯನ್ನು ಇಡುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ಹೆಜ್ಜೆಯನ್ನು ಇಡಿ ಎಷ್ಟು ಸಮಯ ಹಿಡಿಸುತ್ತದೆ? ಸೆಕೆಂಡ್ (ಒಂದು ಕ್ಷಣ). ಹೋಗಲಿ ಎರಡು ಸೆಕೆಂಡ್ ಎಂದುಕೊಳ್ಳಿ. ಒಂದು ವೇಳೆ ಎರಡು ಸೆಕೆಂಡ್ ಎಂದು ಹೇಳಿದರು ಸಹ ಎರಡು ಸೆಕೆಂಡ್ ನಲ್ಲಿ ಪದಮ, ಹಾಗಾದರೆ ಇಡೀ ದಿನದಲ್ಲಿ ಎಷ್ಟು ಪದಗಳಾದವು? ಲೆಕ್ಕ ಹಾಕಿ. ಇಂತಹ ಯಾರಾದರೂ ಮಿಲಿಯನಿಯರ್ ಇದ್ದಾರೆಯೇ ಯಾರು ದಿನದಲ್ಲಿ ಇಷ್ಟು ಸಂಪಾದನೆಯನ್ನು ಮಾಡುತ್ತಾರೆ? ಈ ರೀತಿ ಯಾರಾದರೂ ಇರಲು ಸಾಧ್ಯವೇ? ಎಂದ ಮೇಲೆ ರಿಚ್ಚೆಸ್ಟ್ ಇಂದ ವರ್ಲ್ಡ್ ಆದಿರಿ ಅಲ್ಲವೇ (ಪ್ರಪಂಚದಲ್ಲಿ ಎಲ್ಲರಿಗಿಂತ ಶ್ರೀಮಂತರು). ನಿಮ್ಮ ಖಜಾನೆ ಇಂತಹದ್ದಾಗಿದೆ ಯಾವುದನ್ನು ಬೆಂಕಿ ಸುಡಲು ಸಾಧ್ಯವಿಲ್ಲ, ನೀರು ಮುಳುಗಿಸಲು ಸಾಧ್ಯವಿಲ್ಲ, ಕಳ್ಳರು ಲೂಟಿ ಮಾಡಲು ಸಾಧ್ಯವಿಲ್ಲ, ರಾಜರು ತಿನ್ನಲು ಸಾಧ್ಯವಿಲ್ಲ. ಇಂತಹ ಖಜಾನೆ ಈ ಪುರುಷೋತ್ತಮ ಸಂಗಮ ಯುಗದಲ್ಲಿಯೇ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಹಾಗಾದರೆ ಇಂತಹ ತಮ್ಮ ಸ್ವಮಾನ ಸ್ಮೃತಿಯಲ್ಲಿ ಇರುತ್ತದೆಯೇ? ಇರುತ್ತದೆಯೇ ಇಲ್ಲವೇ? ಹಿಂದಿನವರು ಕೈ ಅಲುಗಾಡಿಸುತ್ತಿದ್ದಾರೆ. ಹಿಂದೆ ಕುಳಿತವರು ಆರಾಮಾಗಿ ಕುಳಿತಿದ್ದೀರಲ್ಲವೇ? ರಿಚೆಸ್ಟ್ ಇನ್ ದಿ ವರ್ಲ್ಡ್ ಎಂದ ಮೇಲೆ ಆರಾಮವೇ ಆರಾಮವಾಗಿದೆ. ದೊಡ್ಡದಕ್ಕಿಂತ ದೊಡ್ಡ ವಿಶ್ವವಿದ್ಯಾಲಯದಲ್ಲಿಯೂ ಸಹ ಇಂತಹ ವಿಷಯಗಳ ಮೇಲೆ ಓದಲು ಕುಳಿತುಕೊಳ್ಳುವುದಿಲ್ಲ, ಆದರೆ ನೀವು ಬೆಗರ್ ಟು ಪ್ರಿನ್ಸ್ ಆಗಿದ್ದೀರಿ(ಭಿಕ್ಷುಕರಿಂದ ರಾಜಕುಮಾರ). ಭಿಕ್ಷುಕರು ಆಗಿದ್ದೀರಿ ರಾಜಕುಮಾರರು ಆಗಿದ್ದೀರಿ. ಸರ್ವ ತ್ಯಾಗ ಎಂದರೆ ಭಿಕ್ಷುಕ. ಸರ್ವಪ್ರಾಪ್ತಿಗಳು ಎಂದರೆ ರಾಜಕುಮಾರ. ತ್ಯಾಗದ ಹೊರತು ಇಷ್ಟು ದೊಡ್ಡ ಭಾಗ್ಯ ಸಿಗುವುದಿಲ್ಲ. ತ್ಯಾಗದಿಂದಲೇ ಭಾಗ್ಯ ಸಿಕ್ಕಿದೆ. ತನು ಮನ ಧನ, ಸಂಬಂಧ ಎಲ್ಲವನ್ನು ತ್ಯಾಗ ಮಾಡಿದೆ ಅರ್ಥಾತ್ ಪರಿವರ್ತನೆ ಮಾಡಿದೆ. ತನು ನನ್ನದರ ಬದಲಾಗಿ ನಿನ್ನದಾಗಿಸಿದೆ. ಮನಸ್ಸು, ಧನ, ಸಂಬಂಧ ಒಂದು ಶಬ್ದವನ್ನು ಪರಿವರ್ತನೆ ಮಾಡುವುದರಿಂದ ನನ್ನದರ ಬದಲಾಗಿ ನಿನ್ನದಾಗಿಸಿದೆ, ಒಂದೇ ಶಬ್ದದ ಪರಿವರ್ತನೆಯಾಗಿದೆ ಆದರೆ ಈ ತ್ಯಾಗದಿಂದ ಭಾಗ್ಯದ ಅಧಿಕಾರಿ ಆಗಿಬಿಟ್ಟಿರಿ. ಹಾಗಾದರೆ ಭಾಗ್ಯದ ಮುಂದೆ ತ್ಯಾಗ ಏನಾಗಿದೆ? ಚಿಕ್ಕ ಮಾತಾಗಿದೆಯೇ ಅಥವಾ ಸ್ವಲ್ಪ ದೊಡ್ಡ ಮಾತಾಗಿದೆಯೇ? ಕೆಲವೊಮ್ಮೆ ದೊಡ್ಡದಾಗಿ

ಬಿಡುತ್ತದೆ. ನಿನ್ನದು ಎನ್ನುವುದು ಎಂದರೆ ದೊಡ್ಡ ಮಾತನ್ನು ಚಿಕ್ಕದನ್ನಾಗಿ ಮಾಡುವುದು ಹಾಗೂ ನನ್ನದು ಎನ್ನುವುದು ಎಂದರೆ ಚಿಕ್ಕ ಮಾತನ್ನು ದೊಡ್ಡದನ್ನಾಗಿ ಮಾಡುವುದು. ಏನೇ ಆಗಲಿ, 100 ಹಿಮಾಲಯಕ್ಕಿಂತ ದೊಡ್ಡ ಸಮಸ್ಯೆ ಬರಲಿ ಆದರೆ ನಿನ್ನದು ಎನ್ನುವುದು ಎಂದರೆ ಬೆಟ್ಟವನ್ನು ಸಾಸಿವೆಯ ಸಮಾನ ಮಾಡುವುದು, ಸಾಸಿವೆಯೂ ಅಲ್ಲ ಹತ್ತಿ. ಹತ್ತಿ ಹೇಗೆ ಸೆಕೆಂಡ್ ನಲ್ಲಿ ಹಾರಿ ಹೋಗುತ್ತದೆ. ಕೇವಲ ನಿನ್ನದು ಎಂದು ಹೇಳುವುದಲ್ಲ ಆದರೆ ಒಪ್ಪಿಕೊಳ್ಳುವುದು, ಕೇವಲ ಒಪ್ಪಿಕೊಳ್ಳುವುದು ಅಲ್ಲ ನಡೆಯುವುದು. ಒಂದು ಶಬ್ದದ ಪರಿವರ್ತನೆ ಸಹಜವಾಗಿದೆ ಅಲ್ಲವೇ. ಇದರಲ್ಲಿ ಲಾಭವೇ ಇದೆ, ನಷ್ಟವಂತೂ ಇಲ್ಲ. ನಿನ್ನದು ಎಂದು ಹೇಳುವುದರಿಂದ ಎಲ್ಲಾ ಹೊರೆಯನ್ನು ತಂದೆಗೆ ಕೊಟ್ಟುಬಿಟ್ಟೆ. ನಿನ್ನದು ನಿನಗೆ ತಿಳಿದಿದೆ. ನೀವು ಕೇವಲ ನಿಮಿತ್ತ ಮಾತ್ರ ಇದ್ದೀರಿ. ಇದರಲ್ಲಿ ಲಾಭವಿದೆ ಅಲ್ಲವೇ? ಭಿನ್ನ ಹಾಗೂ ಪರಮಾತ್ಮನ ಪ್ರಿಯರಾಗಿಬಿಟ್ಟಿರಿ. ಯಾರು ಪರಮಾತ್ಮನ ಪ್ರಿಯರಾಗುತ್ತಾರೆ ಅವರು ವಿಶ್ವ ಪ್ರಿಯರು ಆಗುತ್ತಾರೆ. ಕೇವಲ ಭವಿಷ್ಯದಲ್ಲಿ ಪ್ರಾಪ್ತಿಯಲ್ಲ, ವರ್ತಮಾನವು ಸಹ ಇದೆ. ಒಂದು ಕ್ಷಣದಲ್ಲಿ ಅನುಭವ ಮಾಡಿದ್ದೀರಿ ಇನ್ನಷ್ಟು ಮಾಡಿ ನೋಡಿ. ಯಾವುದೇ ಮಾತು ಬಂದರೂ ಅದನ್ನು ನಿನ್ನದು ಎಂದು ಹೇಳಿಬಿಡಿ, ಒಪ್ಪಿಕೊಂಡು ಬಿಡಿ ಹಾಗೂ ನಿನ್ನದು ಎಂದು ತಿಳಿದು ಮಾಡಿ ಆಗ ನೋಡಿ ಹೊರೆ ಹಗುರ ಎನಿಸುತ್ತದೆಯೇ ಅಥವಾ ಇಲ್ಲವೇ ಎಂದು. ಅನುಭವಿ ಆಗಿದ್ದೀರಿ ಅಲ್ಲವೇ? ಎಲ್ಲರೂ ಅನುಭವಿಗಳು ಕುಳಿತಿದ್ದೀರಲ್ಲವೇ! ಕೇವಲ ಏನಾಗುತ್ತದೆ ಎಂದರೆ, ನನ್ನದು ನನ್ನದು ಎಂದು ಹೇಳುವ ಬಹಳ ಅಭ್ಯಾಸವಿದೆಯಲ್ಲ, 63 ಜನ್ಮಗಳ ಅಭ್ಯಾಸವಿದೆ ಎಂದ ಮೇಲೆ ನಿನ್ನದು ನಿನ್ನದು ಎಂದು ಹೇಳಿ ಮತ್ತೆ ನನ್ನದು ಎಂದು ಹೇಳುತ್ತೀರಿ ಹಾಗೂ ನನ್ನದು ಎಂದು ತಿಳಿದುಕೊಳ್ಳುತ್ತೀರಿ, ಆದರೆ ಆ ಮಾತಂತೂ ಒಂದು ಗಂಟೆಯಲ್ಲಿ, 2 ಗಂಟೆಯಲ್ಲಿ, ಒಂದು ದಿನದಲ್ಲಿ ಸಮಾಪ್ತಿಯಾಗಿ ಬಿಡುತ್ತದೆ ಆದರೆ ಯಾವಾಗ ನಿನ್ನದರಿಂದ ನನ್ನದು ಎಂದು ಹೇಳಿದಿರಿ ಅದರ ಫಲ ದೀರ್ಘಕಾಲ ನಡೆಯುತ್ತದೆ. ಅರ್ಧಗಂಟೆಯ ಮಾತಾಗಿರುತ್ತದೆ ಆದರೆ ಪಶ್ಚಾತಾಪದ ರೂಪದಲ್ಲಾಗಲಿ, ಪರಿವರ್ತನೆ ಮಾಡುವ ಲಕ್ಷದಿಂದಾಗಲಿ, ಆ ಮಾತು ಮತ್ತೆ ಮತ್ತೆ ಸ್ಮೃತಿಯಲ್ಲಿ ಬರುತ್ತಾ ಇರುತ್ತದೆ ಆದ್ದರಿಂದ ತಂದೆ ಎಲ್ಲಾ ಮಕ್ಕಳಿಗೂ ಹೇಳುತ್ತಾರೆ ಒಂದು ವೇಳೆ "ನನ್ನದು ಶಬ್ದ" ದೊಂದಿಗೆ ಪ್ರೀತಿ ಇದೆ, ಅಭ್ಯಾಸವಾಗಿದೆ, ಸಂಸ್ಕಾರವಾಗಿದೆ , ಹೇಳಲೇಬೇಕು ಎಂದರೆ ನನ್ನ ಬಾಬಾ ಎಂದು ಹೇಳಿ. ಅಭ್ಯಾಸದಿಂದ ವಶರಾಗಿದ್ದೀರಲ್ಲವೇ (ಅಭ್ಯಾಸದ ಗುಲಾಮ). ಹಾಗಾದರೆ ಯಾವಾಗ ನನ್ನದು ನನ್ನದು ಎನ್ನುವುದು ಬರುತ್ತದೆ ಆಗ ನನ್ನ ಬಾಬಾ ಎಂದು ಹೇಳಿ ಸಮಾಪ್ತಿ ಮಾಡಿಬಿಡಿ. ಅನೇಕ ನನ್ನದನ್ನು ಒಬ್ಬ ನನ್ನ ತಂದೆಯಲ್ಲಿ ಸಮಾವೇಶ ಮಾಡಿಬಿಡಿ.

ರಷ್ಯಾಯಾದವರು ಒಂದು ಗೊಂಬೆಯನ್ನು ತರುತ್ತೀರಲ್ಲವೇ, ಅದರಲ್ಲಿ ಗೊಂಬೆಯೊಳಗೆ ಇನ್ನೊಂದು ಗೊಂಬೆ.... ಸೇರಿ ಒಂದು ಗೊಂಬೆ ಆಗಿಬಿಡುತ್ತದೆ. ಅದೇ ರೀತಿ ನೀವು ಸಹ ಒಬ್ಬ ನನ್ನ ತಂದೆಯಲ್ಲಿ ಅನೇಕ ನನ್ನದನ್ನು ಸಮಾವೇಶ ಮಾಡಿಬಿಡಿ, ಸಮಾಪ್ತಿ. ಇದನ್ನು ಮಾಡಲು ಸಾಧ್ಯವೇ? ಮಾಡುತ್ತೀರಿ ಆದರೆ ಕೆಲವೊಮ್ಮೆ ನನ್ನದರ ವಿಸ್ತಾರದಲ್ಲಿ ಹೊರಟು ಹೋಗುತ್ತೀರಿ. ಈಗ ಕೆಲವೊಮ್ಮೆ ಇದೆ, ಸದಾ ನನ್ನದು ನಿನ್ನದಾಗುವುದು ಇದರಲ್ಲಿ ನಂಬರ್‌ವಾರ್ ಇದ್ದೀರಿ. ನಂಬರ್ ಒನ್ ಸಹ ಇದ್ದಾರೆ, ಎ ಒನ್ ಸಹ ಇದ್ದಾರೆ ಆದರೆ ಹಿಂದುಳಿದ ನಂಬರ್ ಸಹ ಇದೆ. ಪವಿತ್ರರಾಗಲು ಬಂದಿದ್ದೀರಲ್ಲವೇ? ಹಾಗಾದರೆ ಇದೇ ಮಂತ್ರವನ್ನು ನೆನಪು ಮಾಡಿಕೊಳ್ಳಿ- ನಾನು ತಂದೆಯವನಾಗಿ ಬಿಟ್ಟಿದ್ದೇನೆ, ಆಗಿಬಿಟ್ಟಿದ್ದೇನೆ. ಪರಮಾತ್ಮ ಪರಿವಾರದಲ್ಲಿ ಸೇರಿ ಬಿಟ್ಟಿದ್ದೇನೆ. ಅರ್ಥಾತ್ ಆಗಿಬಿಟ್ಟಿದ್ದೇನೆ. ಹಾಗಾದರೆ ಇಂತಹ ಹೋಲಿ ಆಚರಿಸಿದಿರಾ? ಈಗ ಏನು ಮಾಡಬೇಕು? ಇನ್ನು ಸುಡಬೇಕಾ ಅಥವಾ ಸುಟ್ಟು ಹಾಕಿ ಬಿಟ್ಟಿದ್ದೀರಾ? ಇದಕ್ಕಾಗಿ ಹೌದು ಎಂದು ಹೇಳುತ್ತಿಲ್ಲ, ಯೋಚಿಸುತ್ತಿದ್ದೀರಾ?

ನೋಡಿ ಭಕ್ತಿ ಮಾರ್ಗದಲ್ಲಿ ಏನೆಲ್ಲಾ ಉತ್ಸವವನ್ನು ಆಚರಿಸುತ್ತಾರೆ, ನೆನಪಾರ್ಥವಿದೆ ಅದನ್ನು ಒಂದೊಂದು ಅರ್ಥದಿಂದ ಮಾಡಲಾಗಿದೆ, ಮೊದಲು ಸುಡುವುದು ನಂತರ ಆಚರಿಸುವುದು. ಮೊದಲು ಆಚರಿಸಿ ನಂತರ ಸುಡುವುದಲ್ಲ ಆದರೆ, ಮೊದಲು ಬಸ್ಮ ಮಾಡುವುದು, ಅಶುದ್ಧವನ್ನು, ಬಲಹೀನತೆಗಳನ್ನು, ಕೆಟ್ಟತನವನ್ನು ಸುಡಬೇಕು ನಂತರ ಆಚರಿಸಬೇಕು. ನೀವಂತೂ ಬಹಳ ಮೊದಲೇ ಸುಟ್ಟು ಹಾಕಿದ್ದೀರಿ ಅಲ್ಲವೇ ಇದುವರೆಗೂ ಸ್ವಲ್ಪ ಕೊನೆಯ ಬಟ್ಟೆ ಉಳಿದುಕೊಂಡು ಬಿಟ್ಟಿದೆಯೇ? ಪಾಂಡವರು ಶರ್ಟ್ ಅಥವಾ ಶಾಲನ್ನು ಹಾಕಿಕೊಳ್ಳುತ್ತೀರಿ ಅದರ ತುಂಡು ಉಳಿದುಕೊಂಡು ಬಿಟ್ಟಿದೆಯೇ? ಯಾರದ್ದೂ ಕೊನೆಯ ತುಂಡು ಬಟ್ಟೆ ಉಳಿದುಕೊಂಡಿಲ್ಲ ತಾನೆ? ವಾಸ್ತವದಲ್ಲಿ ನೋಡಿ ಆತ್ಮಿಕ ಆಚರಣೆ ಹಾಗೂ ಆ ಆಚರಣೆಯಿಂದ ಶಕ್ತಿ, ಅತೀಂದ್ರಿಯ ಸುಖ ಅನುಭವ ಮಾಡುವುದು, ಯಾವಾಗ ಸುಟ್ಟು ಹಾಕುವಿರಿ ಆಗಲೇ ಅನುಭವ ಮಾಡಲು ಸಾಧ್ಯ. ಮನೋರಂಜನೆಯ ರೀತಿಯಲ್ಲಿ ಆಚರಿಸುವುದು ಇದು ಬೇರೆ ಮಾತಾಗಿದೆ. ಈ ಸಂಗಮ ಯುಗವಂತು ಮೋಜುಗಳ ಯುಗವಾಗಿದೆ, ಆದ್ದರಿಂದ ಮನೋರಂಜನೆಯ ರೀತಿಯಲ್ಲಿಯೂ ಸಹ ಆಚರಿಸುತ್ತಿರಿ, ಇನ್ನಷ್ಟು ಆಚರಿಸಿ, ಚೆನ್ನಾಗಿ ಆಚರಿಸಿ. ಆದರೆ ಪರಮಾತ್ಮನ ರಂಗಿನಲ್ಲಿ ರಂಗಿತರಾಗುವುದು ಅರ್ಥಾತ್ ತಂದೆಯ ಸಮಾನರಾಗುವುದು. ಇದಾಗಿದೆ ರಂಗಿನಲ್ಲಿ ರಂಗಿತರಾಗುವುದು. ಹೇಗೆ ತಂದೆ ಅಶರೀರಿಯಾಗಿದ್ದಾರೆ, ಅವ್ಯಕ್ತರಾಗಿದ್ದಾರೆ ಅದೇ ರೀತಿ ಅಶರೀರಿತನದ ಅನುಭವ ಮಾಡುವುದು ಹಾಗೂ ಅವ್ಯಕ್ತ ಫರಿಶ್ತಾತನದ ಅನುಭವ ಮಾಡುವುದು ಇದಾಗಿದೆ- ರಂಗಿನಲ್ಲಿ ರಂಗಿತರಾಗುವುದು. ಕರ್ಮ ಮಾಡಿ ಆದರೆ ಅವ್ಯಕ್ತ ಫರಿಶ್ತೆಯಾಗಿ ಕೆಲಸ ಮಾಡಿ. ಯಾವಾಗ ಬೇಕು ಆಗ ಅಶರೀರತನದ ಅನುಭವ ಮಾಡಿ. ಈ ರೀತಿ ಮನಸ್ಸು ಹಾಗೂ ಬುದ್ಧಿ ನಿಮ್ಮ ಹಿಡಿತದಲ್ಲಿರಲಿ. ಆರ್ಡರ್ ಮಾಡಿ- ಅಶರೀರಿಯಾಗಿ ಬಿಡಿ. ಆದೇಶ ಮಾಡಿದಿರಿ ಹಾಗೂ ಆದಿರಿ. ಫರಿಶ್ತೆಯಾಗಿಬಿಟ್ಟಿರಿ. ಮನಸ್ಸನ್ನು ಎಲ್ಲಿ ಯಾವ ಸ್ಥಿತಿಯಲ್ಲಿ ಸ್ಥಿತ ಮಾಡಲು ಬಯಸುತ್ತೀರೋ, ಆ ಸ್ಥಿತಿಯಲ್ಲಿ ಸೆಕೆಂಡಿನಲ್ಲಿ ಸ್ಥಿತರಾಗಿ ಬಿಡಿ. ಹೀಗಲ್ಲ ಜಾಸ್ತಿ ಸಮಯ ಸಿಕ್ಕಿಲ್ಲ, ಐದು ಸೆಕೆಂಡ್ ಹಿಡಿಸಿತು, ಎರಡು ಸೆಕೆಂಡ್ ಬೇಕಾಯಿತು. ಆರ್ಡರ್ ಸಿಕ್ಕ ತಕ್ಷಣ ಆಗಿಲ್ಲ ಅಲ್ಲವೇ, ಕಂಟ್ರೋಲ್ ಮಾಡುವುದರಲ್ಲೇ ಇದ್ದುಬಿಟ್ಟಿಲ್ಲ

ತಾನೇ? ಯಾವುದೇ ಪರಿಸ್ಥಿತಿ ಇರಲಿ, ಏರುಪೇರು ಇರಲಿ ಆದರೆ ಏರುಪೇರಿನಲ್ಲಿಯೂ ಸಹ ಅಚಲರಾಗಿ ಬಿಡಿ. ಇಂತಹ ನಿಯಂತ್ರಣ ಶಕ್ತಿ ಇದೆಯೇ ? ಅಥವಾ ಯೋಚಿಸುತ್ತಾ ಯೋಚಿಸುತ್ತಾ ಅಶರೀರಿಯಾಗಿ ಬಿಡಬೇಕು, ಅಶರೀರಿ ಆಗಬೇಕು, , ಇದರಲ್ಲೇ ಸಮಯ ಕಳೆದು ಹೋಗುತ್ತದೆಯೇ? ಕೆಲವು ಮಕ್ಕಳು ಬಹಳ ಭಿನ್ನ-ಭಿನ್ನ ಪೇ್ೇಸ್ ಬದಲಾಯಿಸುತ್ತಾ ಇರುತ್ತಾರೆ, ಬಾಬಾರವರು ನೋಡುತ್ತಾ ಇರುತ್ತಾರೆ. ಯೋಚಿಸುತ್ತಾರೆ ಅಶರೀರಿ ಆಗಬೇಕು ಮತ್ತು ನಂತರ ಯೋಚಿಸುತ್ತಾರೆ ಅಶರೀರಿ ಎಂದರೆ ಆತ್ಮ ರೂಪದಲ್ಲಿ ಸ್ಥಿತರಾಗುವುದು, ಹೌದು ನಾನು ಆತ್ಮನಾಗಿದ್ದೇನೆ, ಶರೀರವಂತು ಅಲ್ಲ, ಆತ್ಮನಾಗಿದ್ದೇನೆ. ನಾನು ಬರುತ್ತಾ ಆತ್ಮನೇ ಆಗಿದ್ದೆ ಮತ್ತೆ ಆತ್ಮನೇ ಆಗಬೇಕು... ಈಗ ಈ ಯೋಚನೆಯಲ್ಲಿಯೇ ಅಶರೀರಿ ಆಗಿದ್ದೀರಾ ಅಥವಾ ಯುದ್ಧ ಮಾಡಿದಿರಾ? ತನ್ನ ಮನಸ್ಸಿಗೆ ಆರ್ಡರ್ ಮಾಡಿದಿರಿ ಸೆಕೆಂಡಿನಲ್ಲಿ ಅಶರೀರಿ ಆಗಬೇಕು ಎಂದು... ಅಶರೀರಿ ಎಂದರೆ ಏನು ಎಂದು ಯೋಚಿಸಲು ಹೇಳಿದಿರಾ? ಯಾವಾಗ ಆಗುವಿರಿ? ಯಾರು ಆಗುವರು? ಆದೇಶನವನ್ನಂತು ಪಾಲಿಸಲಿಲ್ಲ! ಇದಂತು ನಿಯಂತ್ರಣ ಶಕ್ತಿ ಆಗಿಲ್ಲ! ಈಗ ಸಮಯ ಪ್ರಮಾಣ ಇದೇ ಅಭ್ಯಾಸದ ಅವಶ್ಯಕತೆ ಇದೆ. ಒಂದು ವೇಳೆ ನಿಯಂತ್ರಣ ಶಕ್ತಿ ಇಲ್ಲದಿದ್ದರೆ ಹಲವಾರು ಪರಿಸ್ಥಿತಿಗಳು ಏರುಪೇರಿನಲ್ಲಿ ತಂದುಬಿಡಬಹುದು ಆದ್ದರಿಂದ ಒಂದು ಹೋಲಿ ಶಬ್ದವನ್ನೇ ನೆನಪು ಮಾಡಿದರು ಸಹ ಸರಿ. ಹೋಲಿ(ಆಯಿತು) ಕಳೆದದ್ದು ಕಳೆದು ಹೋಯಿತು ಹಾಗೂ ಹೋಲಿ- ತಂದೆಯವರಾಗಿ ಬಿಟ್ಟೆವು. ಇನ್ನೇನು? ಹೋಲಿ ಎಂದರೆ ಪವಿತ್ರ ಆತ್ಮ ಆಗಿಬಿಟ್ಟೆವು. ಒಂದು ಹೋಲಿ ಎಂಬ ಶಬ್ದವನ್ನು ನೆನಪು ಮಾಡಿಕೊಂಡರೆ ಒಂದು ಹೋಲಿ ಶಬ್ದದ ಮೂರು ಅರ್ಥವನ್ನು ಉಪಯೋಗಿಸಿಕೊಳ್ಳಿ, ವರ್ಣನೆ ಮಾಡಬೇಡಿ. ಹೌದು ಹೋಲಿ ಎಂದರೆ ಕಳೆದದ್ದು ಕಳೆದು ಹೋಯಿತು. ಹೌದು ಆಗಿದ್ದು ಆಗಿ ಹೋಯಿತು- ಈ ರೀತಿ ಕೇವಲ ಯೋಚಿಸುತ್ತಿರುವುದು, ವರ್ಣನೆ ಮಾಡುತ್ತಿರುವುದು, ಈ ರೀತಿಯಲ್ಲ. ಆದರೆ ಸ್ವರೂಪದಲ್ಲಿ ಸ್ಥಿತರಾಗಿ ಬಿಡಿ. ಯೋಚಿಸಿದೆ ಮತ್ತು ಹಾಗೆ ಬಿಟ್ಟೆನು. ಹೀಗಲ್ಲ ಯೋಚಿಸುತ್ತಿದ್ದರೆ ಯೋಚನೆಯಲ್ಲೇ ಕಳೆದು ಹೋದೆ. ಅಲ್ಲ. ಏನು ಯೋಚಿಸಿದೆ ಅದು ಆಗಿಬಿಟ್ಟೆ, ಆಗಿಬಿಟ್ಟೆನು, ಅಂತಹ ಸ್ಥಿತಿ ಆಗಿಬಿಟ್ಟಿತ್ತು.

(ಬಾಪ್ದಾದಾರವರು ಡ್ರಿಲ್ ಮಾಡಿಸಿದರು)

ಈಗ ಸಮಯ ಪ್ರಮಾಣ ನೀವು ಪ್ರತಿಯೊಬ್ಬರೂ ನಿಮಿತ್ತರಾಗಿರುವಂತಹ, ಸದಾ ನೆನಪು ಹಾಗೂ ಸೇವೆಯಲ್ಲಿ ಇರುವಂತಹ ಆತ್ಮಗಳಿಗೆ ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆಯ ಪ್ರಕಂಪನ ಶಕ್ತಿಶಾಲಿಯಾಗಿ ಹಾಗೂ ತೀವ್ರ ಗತಿಯಿಂದ ವೃದ್ಧಿಸಬೇಕು. ನಾಲ್ಕಾರು ಕಡೆ ಮನಸ್ಸಿನ ದುಃಖ ಹಾಗೂ ಅಶಾಂತಿ, ಮನಸ್ಸಿನ ತೊಂದರೆಗಳು ಬಹಳ ತೀವ್ರ ಗತಿಯಿಂದ ಹೆಚ್ಚುತ್ತಿದೆ. ಬಾಪ್ದಾದಾರವರಿಗೆ ವಿಶ್ವದ ಆತ್ಮಗಳ ಮೇಲೆ ದಯೆ ಬರುತ್ತದೆ. ಎಷ್ಟು ತೀವ್ರ ಗತಿಯಿಂದ ದುಃಖದ ಅಲೆಗಳು ಹೆಚ್ಚುತ್ತಿವೆ ಅಷ್ಟೇ ನೀವು ಸುಖ ದಾತ ಮಕ್ಕಳು ತಮ್ಮ ಮನಸ್ಸಿನ ಶಕ್ತಿಯಿಂದ, ಮನಸಾ ಸೇವೆ ಹಾಗೂ ಸಕಾಶದ ಸೇವೆಯಿಂದ, ವೃತ್ತಿಯಿಂದ ನಾಲ್ಕಾರು ಕಡೆ ಸುಖದ ಅಂಜಲಿಯ ಅನುಭವ ಮಾಡಿಸಿ. ತಂದೆಯನ್ನಂತು ಕರೆಯುತ್ತಲೇ ಇರುತ್ತಾರೆ ಆದರೆ ನೀವು ಪೂಜ್ಯ ದೈವಾತ್ಮರನ್ನು ಸಹ ಯಾವುದಾದರೂ ಒಂದು ರೂಪದಲ್ಲಿ ಕರೆಯುತ್ತಾ ಇರುತ್ತಾರೆ. ಹಾಗಾದರೆ ಹೇ ದೇವಾತ್ಮಗಳೇ, ಪೂಜ್ಯ ಆತ್ಮರೇ ತಮ್ಮ ಭಕ್ತ ಆತ್ಮ ಗಳಿಗೆ ಸಕಾಶ ಕೊಡಿ. ವಿಜ್ಞಾನದವರು ಸಹ ಯೋಚಿಸುತ್ತಾರೆ ಇಂತಹ ಸಂಶೋಧನೆಯನ್ನು ಮಾಡಬೇಕು ಯಾವುದರಿಂದ ದುಃಖ ಸಮಾಪ್ತಿಯಾಗಿ ಬಿಡಬೇಕು, ಸಾಧನ ಸುಖದ ಜೊತೆಗೆ ದುಃಖವನ್ನು ಸಹ ಕೊಡುತ್ತದೆ ಆದರೆ ದುಃಖವಿರದಿರಲಿ ಕೇವಲ ಸುಖದ ಪ್ರಾಪ್ತಿ ಇರಬೇಕು ಇದಕ್ಕಾಗಿ ಅವಶ್ಯವಾಗಿ ಯೋಚಿಸುತ್ತಾರೆ. ಆದರೆ ಸ್ವಯಂನ ಆತ್ಮನಲ್ಲೇ ಅವಿನಾಶಿ ಸುಖದ ಅನುಭವ ಇಲ್ಲದಿದ್ದರೆ ಅನ್ಯರಿಗೆ ಹೇಗೆ ಕೊಡಲು ಸಾಧ್ಯ. ಆದರೆ ನಿಮ್ಮೆಲ್ಲರ ಬಳಿ ಸುಖದ, ಶಾಂತಿಯ, ನಿಸ್ವಾರ್ಥ ಸತ್ಯ ಪ್ರೀತಿಯ ಸ್ಟಾಕ್( ಸಂಗ್ರಹ) ಜಮಾ ಇದೆ. ಜಮಾ ಇದೆಯೇ ಅಥವಾ ಎಷ್ಟು ಒಟ್ಟುಗೂಡಿಸುತ್ತೀರಿ ಅಷ್ಟು ಖರ್ಚು ಆಗಿ ಹೋಗುತ್ತದೆಯೇ? ಇದನ್ನು ಸಹ ಪರಿಶೀಲಿಸಿಕೊಳ್ಳಿ- ಜಮಾ ಆಗುತ್ತಿದೆ ಆದರೆ ಜಮಾದ ಜೊತೆ ಜೊತೆ ಖರ್ಚು ಆಗಿ ಹೋಗುತ್ತಿಲ್ಲ ತಾನೆ? ಜ್ಞಾನದ ಖಜಾನೆಯಂತೂ ಖರ್ಚು ಮಾಡುವುದರಿಂದ ವೃದ್ಧಿಯಾಗುತ್ತದೆ, ಕಡಿಮೆಯಾಗುವುದಿಲ್ಲ. ಒಂದು ವೇಳೆ ಮತ್ತೆ ಮತ್ತೆ ತನ್ನ ಸ್ವಭಾವ ಸಂಸ್ಕಾರ ಹಾಗೂ ಮಾಯೆಯ ಕಡೆಯಿಂದ ಬಂದಿರುವಂತಹ ಸಮಸ್ಯೆಗಳಲ್ಲಿ ತಮ್ಮ ಶಕ್ತಿಗಳನ್ನು ಉಪಯೋಗಿಸುತ್ತೀರಿ ಎಂದರೆ ಜಮಾದ ಖಾತೆ ಕಡಿಮೆಯಾಗುತ್ತದೆ. ಹಾಗಾದರೆ ಚೆಕ್ ಮಾಡಿ- ಜಮಾ ಮಾಡಿದಿರಿ ಆದರೆ ಖರ್ಚು ಕೂಡ ಮಾಡಿದಿರಿ ಬಾಕಿ ಖಾತೆಯಲ್ಲಿ ಎಷ್ಟು ಉಳಿಯಿತು? ಸಂಪಾದಿಸಿದರಿ ಹಾಗೂ ತಿಂದಿರಿ, ಹೀಗಂತೂ ಆಗುತ್ತಿಲ್ಲ ತಾನೇ? ಎರಡು ದಿನ ಸಂಪಾದನೆ ಮಾಡಿದೆ ಹಾಗೂ ಒಂದು ದಿನ ಇಷ್ಟು ಕಳೆದುಕೊಂಡೆ ಯಾವುದರಿಂದ ಜಮಾ ಮಾಡಿದ್ದನ್ನು ಸಹ ಖರ್ಚು ಮಾಡಬೇಕಾಯಿತ್ತು, ಇಂತಹ ಖಾತೆಯಂತೂ ಇಲ್ಲ ತಾನೇ? ಈ ರೀತಿ, ಸಂಪಾದನೆ ಮಾಡಿದೆ ಹಾಗೂ ತಿಂದುಬಿಟ್ಟೆ ಅಥವಾ ತನ್ನ ಪ್ರತಿ ಉಪಯೋಗಿಸಿ ಸಮಾಪ್ತಿ ಮಾಡಿದರೆ 21 ಜನ್ಮಗಳಿಗಾಗಿ ಏನನ್ನು ಜಮಾ ಮಾಡಿದಿರಿ? ಜಮಾ ಮಾಡಿದರೆ ಖುಷಿಯಾಗುತ್ತದೆ ಆದರೆ ಖರ್ಚಿನ ಲೆಕ್ಕವನ್ನು ತೆಗೆಯದಿದ್ದರೆ ಸಮಯದಲ್ಲಿ ಮೋಸ ಹೋಗುವಿರಿ. ಜಮಾದ ಖಾತೆಯನ್ನು ನೋಡಿ ಅದರ ಜೊತೆ ಜೊತೆ ತಮ್ಮ ಪ್ರತಿ ಎಷ್ಟು ಖರ್ಚು ಮಾಡಿದೆ. ಅನ್ಯರಿಗೆ ಯಾವುದಾದರೂ ಗುಣ ದಾನ ಮಾಡಿದ್ದೇನೆಯೇ, ಶಕ್ತಿ ಕೊಟ್ಟಿದ್ದೇನೆಯೇ, ಜ್ಞಾನದ ಖಜಾನೆ ಕೊಟ್ಟಿದ್ದೇನೆಯೇ? ಇದು ಖರ್ಚು ಅಲ್ಲ, ಇದು ಜಮಾದ ಖಾತೆಯಲ್ಲಿ ಜಮಾ ಆಗುತ್ತದೆ ಆದರೆ ತಮ್ಮ ಪ್ರತಿ, ಸಮಯ ಪ್ರತಿ ಸಮಯ ಖರ್ಚು ಮಾಡಿಕೊಳ್ಳುತ್ತಾ ಹೋದರೆ ಖಾತೆ ಖಾಲಿಯಾಗಿ ಹೋಗುತ್ತದೆ, ಆದ್ದರಿಂದ ಚೆನ್ನಾಗಿ ವಿಶಾಲ ಬುದ್ಧಿಯಿಂದ ಪರಿಶೀಲನೆ ಮಾಡಿ. ಜಮಾದ ಖಾತೆ ಬಹಳ ಉದ್ದವಾಗಿ ಅಗಲವಾಗಿ ಬೇಕಾಗಿದೆ. ಸಹಜವಾಗಿದೆ ಆದರೆ ಪ್ರತಿಯೊಂದು ಹೆಜ್ಜೆಯಲ್ಲಿ ಪದಮದಷ್ಟು ಜಮಾ ಮಾಡುತ್ತಾ ಹೋಗಿ ಆಗ ಜಮಾದ ಖಾತೆ ಬಹಳ ದೊಡ್ಡದಾಗಿ ಬಿಡುವುದು.

ಹಾಗಾದರೆ ಚೆಕ್ ಮಾಡಿಕೊಳ್ಳಿ- ಪ್ರತಿಯೊಂದು ಕರ್ಮ ಹಾಗೂ ಹೆಜ್ಜೆ ಬ್ರಹ್ಮಾ ತಂದೆಯ ಸಮಾನ ಇರುತ್ತಿತ್ತದೆಯೇ? ಅನುಭವಿಯಾಗಿದ್ದೀರಿ, ಯಾವಾಗ ಯಾರಾದರೂ ಒಳ್ಳೆಯ ಕರ್ಮ ಮಾಡುತ್ತಾರೆ ಎಂದರೆ ಕರ್ಮದ ಫಲ ಅದೇ ಸಮಯ, ಪ್ರತ್ಯಕ್ಷ ರೂಪದಲ್ಲಿ ಖುಷಿ, ಶಕ್ತಿ ಹಾಗೂ ಸಫಲತೆಯ ಕಾರಣ ಡಬಲ್ ಲೈಟ್ ಆಗಿರುತ್ತೀರಿ ಏಕೆಂದರೆ ನೆನಪಿರುತ್ತದೆ- ತಂದೆಯ ಜೊತೆಯಲ್ಲಿದ್ದು ಕರ್ಮ ಮಾಡಿದೆ. ಹಾಗೂ ಒಂದು ವೇಳೆ ಈಗ ಯಾವುದಾದರೂ ವಿಕರ್ಮವಾಯಿತು ಆಗ ಅದರ ಪಶ್ಚಾತಾಪ ಬಹಳ ದೀರ್ಘಕಾಲದ್ದಾಗಿದೆ. ಹಾಗೆ ನೋಡಿದರೆ ಈಗ ಯಾವುದೇ ವಿಕರ್ಮ ಆಗುವಂತಿಲ್ಲ, ಆ ಸಮಯ ಈಗ ಕಳೆದು ಹೋಯಿತು, ಆದರೆ ಈಗ ಯಾವುದೇ ವ್ಯರ್ಥ ಸಂಕಲ್ಪ ಅಥವಾ ವ್ಯರ್ಥ ಕರ್ಮ, ವ್ಯರ್ಥ ಮಾತು, ವ್ಯರ್ಥ ಸಂಬಂಧ ಸಂಪರ್ಕವೂ ಸಹ ಇರಬಾರದು ಏಕೆಂದರೆ ವ್ಯರ್ಥ ಸಂಬಂಧ ಸಂಪರ್ಕವೂ ಸಹ ಬಹಳ ಮೋಸ ಮಾಡುತ್ತದೆ. ಎಂತಹ ಸಂಘ ಅಂತಹ ರಂಗು ಬಂದುಬಿಡುತ್ತದೆ. ಕೆಲವು ಮಕ್ಕಳು ಬಹಳ ಚತುರರಾಗಿದ್ದಾರೆ, ಹೇಳುತ್ತಾರೆ- ನಾವಂತೂ ಸಂಗ ಮಾಡಿಕೊಳ್ಳುವುದಿಲ್ಲ ಆದರೆ, ಅವರು ನಮ್ಮನ್ನು ಬಿಡುವುದಿಲ್ಲ, ನಾನು ಹೋಗುವುದಿಲ್ಲ, ಆದರೆ ಅವರು ಬಿಡುತ್ತಿಲ್ಲ. ಹಾಗಾದರೆ ಬದಿಗೆ ಸರಿಸುವುದು ಬರುವುದಿಲ್ಲವೇ? ಒಂದು ವೇಳೆ ಕೆಟ್ಟ ವಸ್ತುವನ್ನು ನಿಮಗೆ ಕೊಟ್ಟರೆ ನೀವು ಏಕೆ ತೆಗೆದುಕೊಳ್ಳುತ್ತೀರಿ! ತೆಗೆದುಕೊಳ್ಳುವವರು ತೆಗೆದುಕೊಳ್ಳಲಿಲ್ಲ ಎಂದರೆ ಕೊಡುವವರು ಏನು ಮಾಡುವರು? ವ್ಯರ್ಥ ಸಂಬಂಧ ಹಾಗೂ ಸಂಪರ್ಕವೂ ಸಹ ಖಾತೆಯನ್ನು ಖಾಲಿ ಮಾಡಿಬಿಡುತ್ತದೆ. ಹಾಗೂ ಅದೇ ಸಮಯ ಹೃದಯದ ಒಳಗೆ ಬರುತ್ತದೆ, ಮನಸ್ಸು ತಿನ್ನುತ್ತದೆ- ಈ ರೀತಿ ಮಾಡಬಾರದಾಗಿತ್ತು. ಮಾಡಬಾರದಾಗಿತ್ತು ಆದರೂ ಸಹ ಮಾಡಿಬಿಡುತ್ತೀರಿ. ಕೇಳಬಾರದಾಗಿತ್ತು ಆದರೆ ಅವರು ಹೇಳಿದರು, ಏನು ಮಾಡಲಿ! ಆದರೆ ಒಂದು ವೇಳೆ ಪುರುಷಾರ್ಥಿಯಾಗಿದ್ದಲ್ಲಿ ವ್ಯರ್ಥಕರ್ಮವು ಸಹ ಆಗಬಾರದು. ಹುಡುಗಾಟಕೆ ಇದ್ದರಂತೂ ಮುಗಿದು ಹೋಯಿತು , ಆರಾಮಾಗಿ ಮಲಗಿಬಿಡಿ, ತ್ರೇತಾಯುಗದಲ್ಲಿ ಬನ್ನಿ. ಆದರೆ ಒಂದು ವೇಳೆ ಪುರುಷಾರ್ಥವಿದ್ದರೆ ಅದೇ ಸಮಯದಲ್ಲಿ ಬರುತ್ತದೆ, ಮನಸ್ಸು ತಿನ್ನುತ್ತದೆ- ಈ ರೀತಿ ಮಾಡಬಾರದು ಆದರೂ ಸಹ ಮಾಡುತ್ತೀರಿ ಎಂದರೆ ಬಾಪ್ದಾದಾರವರು ಹೇಳುತ್ತಾರೆ- ಇಂತಹ ಮಕ್ಕಳು ಸಹ ಅದ್ಭುತವಾಗಿದ್ದಾರೆ. ಬಯಸದಿದ್ದರೂ ಮಾಡುತ್ತಾ ಇರುತ್ತಾರೆ, ಮನಸ್ಸು ತಿನ್ನುತ್ತಾ ಇರುತ್ತದೆ ಹಾಗೂ ಕೇಳಿಸಿಕೊಳ್ಳುತ್ತಾ ಇರುತ್ತಾರೆ, ಮಾಡುತ್ತಲು ಇರುತ್ತಾರೆ, ಎಂದ ಮೇಲೆ ಬಹಳ ಶಕ್ತಿಶಾಲಿ ಆತ್ಮಗಳಾಗಿದ್ದಾರೆ! ಆದ್ದರಿಂದ ವ್ಯರ್ಥದ ಮೇಲೆ ಗಮನವಿಟ್ಟು ಪರಿಶೀಲನೆ ಮಾಡಿ. ಒಳ್ಳೆಯದು.

ನಾಲ್ಕಾರು ಕಡೆಯ ಪವಿತ್ರ ಆತ್ಮರಿಗೆ, ಸದಾ ಶ್ರೇಷ್ಠ ಸ್ಥಿತಿಯಲ್ಲಿರುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಸರ್ವ ಖಜಾನೆಗಳಿಂದ ಸಂಪನ್ನ ಶ್ರೀಮಂತ ಆತ್ಮರಿಗೆ, ಸದಾ ಪ್ರತಿಯೊಂದು ಹೆಜ್ಜೆಯಲ್ಲಿ ಪದಮದಷ್ಟು ಜಮಾ ಮಾಡಿಕೊಳ್ಳುವಂತಹ, ತಂದೆಯ ಸಮಾನರಾಗುವಂತಹ ಶ್ರೇಷ್ಠ ಆತ್ಮರಿಗೆ, ಸದಾ ದಯಾಹೃದಯಿ, ಕ್ಷಮೆಯ ಸಾಗರನ ಮಕ್ಕಳು ಮಾಸ್ಟರ್ ಕ್ಷಮೆ ಮಾಡುವಂತಹ ಆತ್ಮರಿಗೆ, ವಿಶ್ವದ ದುಃಖಿ ಆತ್ಮರಿಗೆ ಸಕಾಶದ ಮೂಲಕ ಸುಖ ಶಾಂತಿಯ ಅಂಜಲಿ ಕೊಡುವಂತಹ ಆತ್ಮರಿಗೆ, ಪ್ರತಿ ಸಮಯ ತಮ್ಮ ಜಮಾದ ಖಾತೆಯಲ್ಲಿ ಸಂಪನ್ನರಾಗಿ ಇರುವಂತಹ ಅತಿ ತೀವ್ರ ಪುರುಷಾರ್ಥಿ ಆತ್ಮರಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

**ವರದಾನ:** ವರದಾನ: ಹೋಲಿ ಶಬ್ದದ ಅರ್ಥವನ್ನು ಜೀವನದಲ್ಲಿ ತಂದು ಪುರುಷಾರ್ಥದ ಗತಿಯನ್ನು ತೀವ್ರ ಮಾಡುವಂತಹ ತೀವ್ರ ಪುರುಷಾರ್ಥಿ ಭವ

ಹೋ ಲಿ ಅರ್ಥಾತ್ ಏನು ಮಾತಾಗಿದೆ, ಕಳೆದು ಹೋಯಿತು ಅದನ್ನು ಸಂಪೂರ್ಣ ಸಮಾಪ್ತಿ ಮಾಡಿಬಿಡಿ. ಕಳೆದದ್ದನ್ನು ಕಳೆದು ಮುಂದೆವರೆಯುವುದು ಇದೇ ಹೋಲಿ ಆಚರಿಸುವುದಾಗಿದೆ. ಕಳೆದು ಹೋಗಿರುವ ಮಾತು ಈ ರೀತಿ ಅನುಭವವಾಗಲಿ ಹೇಗೆ ಬಹಳ ಹಳೆಯ ಯಾವುದೋ ಜನ್ಮದ ಮಾತಾಗಿದೆ, ಯಾವಾಗ ಇಂತಹ ಸ್ಥಿತಿಯಾಗಿ ಬಿಡುತ್ತದೆ ಆಗ ಪುರುಷಾರ್ಥದ ಗತಿ ತೀವ್ರವಾಗುತ್ತದೆ. ತಮ್ಮ ಹಾಗೂ ಅನ್ಯರ ಕಳೆದಿರುವ ಮಾತುಗಳನ್ನು ಎಂದೂ ಚಿಂತನೆಯಲ್ಲಿ ತರಬಾರದು. ಚಿತ್ತದಲ್ಲಿಟ್ಟುಕೊಳ್ಳಬಾರದು ಮತ್ತು ವರ್ಣನೆಯಂತು ಎಂದೂ ಮಾಡಬಾರದು, ಆಗಲೇ ತೀವ್ರ ಪುರುಷಾರ್ಥಿಯಾಹಬಹುದು.

**ಸ್ಲೋಗನ್:** ಸ್ಲೋಗನ್: ನನ್ನತನದ ಅನೇಕ ಸಂಬಂಧಗಳನ್ನು ಸಮಾಪ್ತಿ ಮಾಡುವುದೇ ಫರಿಶ್ತಾ ಆಗುವುದಾಗಿದೆ.